ಯಾರ ಭಯವೂ ಇಲ್ಲದೆ ಹಾಡು ಹೇಳುತ್ತಾ ಈ ಹೆಣ್ಣುಗಳು ಸಂಚರಿಸುತ್ತವೆಯೆಂದರೆ ಗಾಂಧೀಜಿ ಕಂಡ ಕನಸು ನನಸಾಗಿದೆ ಎಂದೇ ಅರ್ಥವಲ್ಲವೇ? ಆದರೂ ಗಾಂಧೀಜಿಯ ಅಹಿಂಸೆಯ ನಾಡಲ್ಲಿ, ಅಣುವ್ರತಗಳನ್ನು ಆಚರಿಸುವ ಮಣ್ಣಲ್ಲಿ ಈ ಉಪದ್ವ್ಯಾಪಿಗಳನ್ನು ಈ ರೀತಿ ಕೊಲ್ಲುವುದೇ? ಎಂದು ಯಾರಾದರೂ ಕೇಳಿದರೆ ನನ್ನಲ್ಲಿ ಉತ್ತರವಿಲ್ಲ. ತತ್ತಿಗಳನ್ನು ಉತ್ಪಾದಿಸಲು ಹೆಣ್ಣು ಸೊಳ್ಳೆಗಳಿಗೆ ರಕ್ತದ ಅಗತ್ಯವಿದೆ ಎಂಬುದು ವಿಜ್ಞಾನ ಹೇಳುವ ಸತ್ಯ. ಹಾಗಾಗಿ ಈ ಅನಾಫೆಲೀಸರು ಅನಾಚಾರ ಮಾಡಿ ಎಷ್ಟೇ ಅನಾರೋಗ್ಯ ಉಂಟು ಮಾಡಿದರೂ ಅದು ಅವರ ಸಂತಾನವನ್ನು ಉಳಿಸಲು ಮಾಡುವ ಹೋರಾಟ... ಇಂಥಾ ತ್ಯಾಗಮಯಿಗಳನ್ನು, ಕಚ್ಚದಿದ್ದರೂ ಕೊಲ್ಲುವ ಮಾನವ ಪುರುಷರ ವಿರುದ್ಧ ನಮ್ಮ ಹೋರಾಟ... ಎಂದು ಯಾವ ಮಹಿಳಾವಾದಿ ಸಂಘಟನೆಯೂ ಇದುವರೆಗೆ ಬಾವುಟ ಹಿಡಿದಿಲ್ಲ. ಇರಲಿ, ಬೇರೇನೂ ಇಷ್ಯೂಗಳಿಲ್ಲದಾಗ ಈ ವಿಷ್ಯವನ್ನು ಕೈಗೆತ್ತಿಕೊಳ್ಳಬಹುದು ಎಂದು ಆಶಿಸುತ್ತಾ... ನಿದ್ದೆ ಇಲ್ಲದೆ ಆ.. ಆ.. ಆಕಳಿಕೆ ಎತ್ತುತ್ತಿದೆ... ಸರಿ ಹಾಗಿದ್ರೆ ಇನ್ನು ನನ್ನ ಪರದೆ ಸಮಯ ಸುರು. 'ಪರ್ದೇ ಮೇ ರೆಹನೇ ದೋ...' ಶುಭರಾತ್ರಿ... ಮತ್ತೆ ಸಿಗೋಣ. ಮಲಗುವ ಮುನ್ನ ದೇವರಲ್ಲಿ ಒಂದು ಪ್ರಾರ್ಥನೆ:

ಕಚ್ಚುವ ಕೀಟಗಳನು ತೊಲಗಿಸಲು
ಕುಚ್ಚಿನ ಬಾಲವನ್ನಾದರು ಕರುಣಿಸೋ
ಕುಚ್ಚಿನ ಬಾಲವ ಕೊಡದಿರೆ ಚಿಂತೆಯಿಲ್ಲ
ಮುಚ್ಚುವ ದಪ್ಪ ತೊಗಲನ್ನಾದರು ಕೊಡೋ
ಮುಚ್ಚುವ ತೊಗಲ ಕೊಡದಿರೆ ಚಿಂತೆಯಿಲ್ಲ
ಸ್ವಚ್ಛ ಸುಂದರ ನಗರದಲ್ಲಾದರು ಇರಿಸಿ
ಚುಚ್ಚಿ ಕೊಲ್ಲುವ ತುಚ್ಛ ಖಚರರಿಂದ ರಕ್ಷಿಸೋ
ಉಚ್ಛರಲಿ ಸರ್ವೋಚ್ಛನಾಗಿಹ ಮಶಕಾರಿಹರಿಯೇ||

(ಈಗಾಗಲೆ ತಾಳ ತಟ್ಟಿ ಸುಸ್ತಾಗಿರುವುದರಿಂದ ಇದನ್ನು ಉಗಾಭೋಗಗಳ ಧಾಟಿಯಲ್ಲಿ ಹಾಡಬೇಕಾಗಿ ಕೋರಿಕೆ)


**ರೇಶ್ಮಾ ಭಟ್**

ಹುಟ್ಟೂರು ಕೊಡಗಿನ ವಿರಾಜಪೇಟೆ. ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ನಿವಾಸಿ. ವೃತ್ತಿಯಲ್ಲಿ ಉಪನ್ಯಾಸಕಿ. 'ನವೆ ನವೋನ್ಮೇಷಶಾಲಿನೀ' ಎಂಬ ಲಲಿತ ಪ್ರಬಂಧ ಸಂಕಲನ ಹಾಗೂ 'ಕಥಾ ವ್ಯವಕಲನ' ಎನ್ನುವ ಕಥಾಸಂಕಲನ ಪ್ರಕಟವಾಗಿದೆ. ಕತೆ, ಲಲಿತ ಪ್ರಬಂಧ, ಲೇಖನ, ಕವನ, ಹನಿಗತೆಗಳು, ಹನಿಗವನಗಳು ನಾಡಿನ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಗಮಕಿ ಹಾಗೂ ಆಕಾಶವಾಣಿ ಕಲಾವಿದೆ.